47) ವೆಸ್ಟ್ ಆಫ್ ಕಾರ್ಡ್ ರಸ್ತೆ 3ನೇ ಸ್ಟೇಜ್ 2ನೇ ಬ್ಲಾಕ್
48) ನಂದಿನಿ ಬಡಾವಣೆ
49) ವೆಸ್ಟ್ ಆಫ್ ಕಾರ್ಡ್ ರಸ್ತೆ 4ನೇ ಸ್ಟೇಜ್
50) ವೆಸ್ಟ್ ಆಫ್ ಕಾರ್ಡ್ ರಸ್ತೆ 4ನೇ ಸ್ಟೇಜ್ 4ನೇ ಬ್ಲಾಕ್
51) ರಾಜಾಜಿನಗರ ಆರ್ ಬ್ಲಾಕ್
52) ಸರ್ ಎಂ ವಿಶ್ವೇಶ್ವರಯ್ಯ ಬಡಾವಣೆ
53) ನಾಗರಭಾವಿ ಬಡಾವಣೆ
54) ನಾಗರಭಾವಿ 1ನೇ ಬ್ಲಾಕ್ ನಿಂದ 14ನೇ ಬ್ಲಾಕ್
55) ಚಂದ್ರಾ ಬಡಾವಣೆ
56) ಚಂದ್ರಾ ಬಡಾವಣೆ 2ನೇ ಸ್ಟೇಜ್ 1ನೇ ಫೇಸ್
57) ಎಂ ಆರ್ ಸಿ ಆರ್ ಬಡಾವಣೆ
58) ಆರ್ ಪಿ ಸಿ ಬಡಾವಣೆ
59) ಅಂಬೇಡ್ಕರ್ ಬಡಾವಣೆ
60) ಜ್ಞಾನಭಾರತಿ ಲೇಔಟ್
61) ನಾಗರಭಾವಿ 1ನೇ ಹಂತ 1ನೇ ಫೇಸ್
62) ಕೆಂಗೇರಿ ಉಪನಗರ ಬಡಾವಣೆ
63) ಗಂಗೊಂಡನಹಳ್ಳಿ (ನಾಗರಭಾವಿ ಸರ್ವೆ ನಂ.8)

365 (250) ಶ್ರೀ ಸೋಮಣ್ಣ.ವಿ: ಮಾನ್ಯ ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರಕ್ಕೆ ಪ್ರತಿವಾರ ಕರ್ನಾಟಕ ರಾಜ್ಯದ ವಿವಿಧ ಲಾಟರಿ ಡ್ರಾಗಳಿಂದ ಬರತಕ್ಕ ವರಮಾನವೆಷ್ಟು?

ಆ) ಈ ಲಾಟರಿ ಟಿಕೇಟುಗಳ ಮಾರಾಟದಲ್ಲಿ ತೊಡಗಿರುವವರ ಸಂಖ್ಯೆ ಎಷ್ಟು?

ಇ) ರಾಜ್ಯ ಸರ್ಕಾರದ ಲಾಟರಿಯನ್ನು ಇನ್ನೂ ಹೆಚ್ಚು ಆಕರ್ಷಕಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಈ) ಕರ್ನಾಟಕ ರಾಜ್ಯದ ಲಾಟರಿ ಟಿಕೇಟುಗಳು ಬೆಂಗಳೂರು ಹೊರತುಪಡಿಸಿ ಇತರ ಭಾಗಗಳಲ್ಲಿ ಹೆಚ್ಚು ಮಾರಾಟವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಕರ್ನಾಟಕ ರಾಜ್ಯ ಲಾಟರಿಯನ್ನು ರದ್ದುಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಶ್ರೀ ಬಸವರಾಜ್ ಎಸ್. ಹೊರಟ್ಟಿ (ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):

ಅ) ಕರ್ನಾಟಕ ರಾಜ್ಯದ ವಿವಿಧ ಲಾಟರಿ ಡ್ರಾಗಳಲ್ಲಿ ಪ್ರತಿವಾರ ಸುಮಾರು 49 ರಿಂದ 50 ಕೋಟಿ ರೂಪಾಯಿಗಳ ವ್ಯವಹಾರ ನಡೆಯುತ್ತಿದ್ದು ಮಾರುಕಟ್ಟೆ ಏಜಂಟರಿಂದ 2004-05ನೇ ಸಾಲಿಗೆ ರೂ.60 ಕೋಟಿ ನಿವ್ವಳ ಆದಾಯವನ್ನು ನಿರೀಕ್ಷಿಸಲಾಗಿದೆ.

ಆ) ಸುಮಾರು 25,000ದಿಂದ 30,000ಜನ ಈ ಲಾಟರಿ ಟಿಕೇಟ್‌ಗಳ ಮಾರಾಟದಲ್ಲಿ ತೊಡಗಿರುತ್ತಾರೆ.

ಇ) ಬಹುಮಾನ ಮೊತ್ತವನ್ನು ಶೇಕಡ 47ರಿಂದ ಶೇಕಡ 82ಕ್ಕೆ ಹೆಚ್ಚಿಸಿ ಲಾಟರಿ ಡ್ರಾಗಳ ರಚನೆಯನ್ನು ಮಾರ್ಪಡಿಸಲಾಗಿದೆ.

ಈ) ಇಲ್ಲ.

ಉ) ಇಲ್ಲ.

366 (1042) ಶ್ರೀ ವಿ.ಸೋಮಣ್ಣ. (ಬಿನ್ನಿಪೇಟೆ): ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ವಾಹನ ಸಂಚಾರವನ್ನು ಸುಗಮಗೊಳಿಸಲು ಎಷ್ಟು ಮುಖ್ಯ ರಸ್ತೆಗಳನ್ನು ಅಗಲೀಕರಣಗೊಳಿಸಲಾಗುವುದು;

ಆ) ಇದಕ್ಕಾಗಿ ತಗಲುವ ಅಂದಾಜು ವೆಚ್ಚವೆಷ್ಟು;

ಇ) ಇದಕ್ಕಾಗಿ ಖಾಸಗಿ ಜಾಗವನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿದೆಯೇ;

ಈ) ಹಾಗಿದ್ದಲ್ಲಿ, ಖಾಸಗಿ ಜಾಗವನ್ನು ಸ್ವಾಧೀನಪಡಿಸಿಕೊಳ್ಳಲು ಕೈಗೊಂಡಿರುವ ಅಥವಾ ಕೈಗೊಳ್ಳಲಿರುವ ಕ್ರಮಗಳೇನು;

ಉ) ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಯವರು):

ಅ) ಮೊದಲ ಹಂತದಲ್ಲಿ ಅಗಲೀಕರಣಗೊಳಿಸಲು ಉದ್ದೇಶಿಸಿರುವ ರಸ್ತೆಗಳು ವಿವರಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ನೀಡಲಾಗಿದೆ.

ಆ) ಈ ರಸ್ತೆಗಳ ಅಗಲೀಕರಣಗೊಳಿಸುವ ಸಂಬಂಧದಲ್ಲಿ ಬಗ್ಗೆ ಸರ್ವೆ ಕಾರ್ಯ ನಡೆಯುತ್ತಿದ್ದು, ಸರ್ವೆ ಮುಗಿದ ನಂತರ ಅಂದಾಜು ತಯಾರಿಸಿದ ನಂತರ ಮಾಹಿತಿ ಲಭ್ಯವಾಗುವುದು ಹಾಗೂ ಅಂದಾಜು ವೆಚ್ಚ ಗೊತ್ತಾಗುವುದು.

ಇ) ಈ ರಸ್ತೆಗಳ ಸರ್ವೆ ಕಾರ್ಯ ಮುಗಿದ ನಂತರ ರಸ್ತೆಗಳ ಅಗಲೀಕರಣಕ್ಕೆ ನಿರ್ಧರಿಸಲಾಗುವ (No. of reads) ಖಾಸಗೀ ಸ್ವತ್ತನ್ನು ಸ್ವಾಧೀನಪಡಿಸಿಕೊಂಡು ಅಂತಿಮಗೊಳಿಸಲಾಗುವುದು.

ಈ) ರಸ್ತೆ ಅಗಲೀಕರಣಗೊಳಿಸುವ ಸಮಯದಲ್ಲಿ ಖಾಸಗೀ ಜಾಗವನ್ನು ಸ್ವಾಧೀನಪಡಿಸಿಕೊಳ್ಳುವ ಅಗತ್ಯ ಉಂಟಾದಲ್ಲಿ ಉದ್ದೇಶಿತ ಕರ್ನಾಟಕ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಆಕ್ಟ್ 1961 ಅಡಿ Transfer of Development Right ಪ್ರಕರಣದನ್ವಯ ಕ್ರಮ ವಹಿಸಿಲಾಗುವುದು.

ಉ) ಸರ್ವೆ ಕಾರ್ಯ ಪ್ರಾರಂಭಿಸಲಾಗಿರುತ್ತದೆ. ಆದಷ್ಟು ಬೇಗನೆ ರಸ್ತೆ ಅಗಲೀಕರಣ ಪ್ರಾರಂಭಿಸಲಾಗುವುದು.